# ಧೀರ ಬಾಲಕ ನರೇಂದ್ರ

**ಅ) ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer in one sentence)**

೧. ಬಾಲಕ ನರೇಂದ್ರ ಮೇಲೆ ಏನು ಹರಿದು ಹೋಯಿತು?

ಉ: ಬಾಲಕ ನರೇಂದ್ರ ಮೇಲೆ ಹಾವು ಹರಿದು ಹೋಯಿತು?

೨. ನರೇಂದ್ರ ತೋಟದಲ್ಲಿ ಯಾರಿಗಾಗಿ ಕಾದನು?

ಉ: ನರೇಂದ್ರ ತೋಟದಲ್ಲಿ ಭೂತಕ್ಕಾಗಿ ಕಾದನು.

೩.ರಾಮಕೃಷ್ಣ ಪರಮಹಂಸರು ನರೇಂದ್ರನನ್ನು ಯಾವ ಹೆಸರಿನಿಂದ ಕರೆದರು?

ಉ: ರಾಮಕೃಷ್ಣ ಪರಮಹಂಸರು ನರೇಂದ್ರನನ್ನು ಸ್ವಾಮಿ ವಿವೇಕಾನಂದ ಹೆಸರಿನಿಂದ ಕರೆದರು.

FOR KANNADA

೪. ಸ್ವಾಮಿ ವಿವೇಕಾನಂದರು ಜನರಿಗೆ ಕೊಟ್ಟ ಸಂದೇಶವೇನು?

ಉ: ಸ್ವಾಮಿ ವಿವೇಕಾನಂದರು ಜನರಿಗೆ ಕೊಟ್ಟ ಸಂದೇಶ 'ಏಳಿ! ಎದ್ದೇಳಿ! ಎಚ್ಚರಗೊಳ್ಳಿರಿ! ಗುರಿ ಮುಟ್ಟುವವರೆಗೆ ನಿಲ್ಲದಿರಿ. ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ'.

೫. ಸ್ವಾಮಿ ವಿವೇಕಾನಂದರು ಜನರ ಕಷ್ಟ ಹೇಗೆ ಅರಿತರು?

ಉ: ಸ್ವಾಮಿ ವಿವೇಕಾನಂದರು ಜನರ ಕಷ್ಟ ದೇಶ ಸುತ್ತಿ ಅರಿತರು.

**ಆ) ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (Answer in two-three sentences)**

೧. ಬಾಲಕ ನರೇಂದ್ರನ ಮೇಲೆ ಹಾವು ಹರಿದ ಪ್ರಸಂಗ ಯಾವುದು?

ಉ: ಬಾಲಕ ನರೇಂದ್ರ ಕಣ್ಮುಚ್ಚಿಲ್ಲದೆ ಚಿಂತನೆ ಮಾಡುತ್ತಿದ್ದ ಮೈಮೇಲೆ ಪರಿವಿಲ್ಲದೆ ಅವನ ಮೇಲೆ ಆ ಒಂದು ಹರಿದು ಹೋಯಿತು ಇದು ಬಾಲಕ ನರೇಂದ್ರನ ಮೇಲೆ ಹಾವು ಹರಿದ ಪ್ರಸಂಗವಾಗಿದೆ.

೨. ತೋಟದ ಮಾಲಿಗೆ ಮಕ್ಕಳಿಂದ ಯಾವ ತೊಂದರೆ ಆಯಿತು?

ಉ: ನರೇಂದ್ರ ಮತ್ತು ಅವನ ಗೆಳೆಯರು ತೋಟದಲ್ಲಿದ್ದ ಮಾವಿನ ಮರವನ್ನು ಹತ್ತುತ್ತಿದ್ದರು. ಕೊಂಬೆಯಿಂದ ಕೊಂಬೆಗೆ ಹಾರುತ್ತಾ ಕೂಗುತ್ತಾ ಆಟವಾಡುತ್ತಿದ್ದರು. ಇದರಿಂದ ತೋಟದ ಮಾಲಿಗೆ ತೊಂದರೆಯಾಗುತ್ತಿತ್ತು.

೩. ತೋಟದ ಮಾಲಿ ಮಕ್ಕಳಿಗೆ ಏನೆಂದು ಹೇಳಿದನು?

ಉ: ತೋಟದ ಮಾಲಿ ಮಕ್ಕಳಿಗೆ ಆ ಮರದಲ್ಲಿ ಭೂತ ಇದೆ. ನೀವು ಈಗಲೇ ಜಾಗ ಬಿಟ್ಟು ಹೋಗಿ ಇಲ್ಲದಿದ್ದರೆ ನಿಮ್ಮನ್ನು ನುಂಗಿ ಬಿಡುತ್ತದೆ ಎಂದು ಹೇಳಿದನು.

೪. ಡಾಯರಸನ್ ನು ಏಕೆ ಬೆರಗಾದನು?

ಉ: ವಿವೇಕಾನಂದರು ಡಾಯರಸನ್ ಅವರ ಮನೆಯಲ್ಲಿ ಪುಸ್ತಕ ಓದುತ್ತಾ ಕುಳಿತಾಗ ಅವರೊಡನೆ ಮಾತನಾಡಲು ಆರಂಭಿಸಿದರು. ಪುಸ್ತಕದ ನೂರಾರು ಸಾಲುಗಳನ್ನು ಅದರಂತೆ ಉದಾಹರಿಸುತ್ತಿದ್ದರು. ಇದನ್ನು ಕಂಡ ಡಾಯರಸನ್ ಬೆರಗಾದರು.

೫. ಸ್ವಾಮಿ ವಿವೇಕಾನಂದರು ಡಾಯರಸನ್ ಗೆ ಏನೆಂದು ಉತ್ತರಿಸಿದರು?

ಉ: ಸ್ವಾಮಿ ವಿವೇಕಾನಂದರು ಡಾಯರಸನ್ ಗೆ ಇದೆಲ್ಲ ಓದುವಾಗಿನ ಏಕಾಗ್ರತೆಯಿಂದ ಸಾಧ್ಯ. ಆ ಸಮಯದಲ್ಲಿ ಉರಿಯುವ ಕೆಂಡವನ್ನು ನನ್ನ ಮೇಲೆ ಇಟ್ಟರೂ ಗೊತ್ತಾಗುವುದಿಲ್ಲ ಎಂದು ಉತ್ತರಿಸಿದರು.

೬. ಪ್ರಾಣಿಗಳ ಬಗ್ಗೆ ನರೇಂದ್ರನ ಅಭಿಪ್ರಾಯವೇನು?

ಉ: ಪ್ರಾಣಿಗಳ ತಂಟೆಗೆ ನಾವು ಹೋಗದಿದ್ದರೆ ಅವು ನಮಗೆ ಏನೂ ಮಾಡುವುದಿಲ್ಲ ಎಂಬುದು ನರೇಂದ್ರನ ಅಭಿಪ್ರಾಯವಾಗಿತ್ತು.

೭. ಭೂತದ ಬಗೆಗೆ ನರೇಂದ್ರನ ವಿಚಾರಗಳೇನು?

ಉ: ಭೂತದ ಬಗೆಗೆ ಇರುವ ಭಯದ ಮಾತುಗಳನ್ನು ನಂಬಬಾರದು ಎಂಬುದು ನರೇಂದ್ರನ ವಿಚಾರವಾಗಿತ್ತು.

೮. ಏಕಾಗ್ರತೆ ಎಂದರೇನು?

ಮನಸ್ಸನ್ನು ಒಂದೇ ವಿಷಯದ ಕಡೆಗೆ ಕೇಂದ್ರೀಕರಿಸುವದನ್ನು ಏಕಾಗ್ರತೆ ಎನ್ನುತ್ತಾರೆ.

**ಇ. ಕೆಳಗಿನ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು. (Who told whom)**

೧. "ಪ್ರಾಣಿಗಳ ತಂಟೆಗೆ ಹೋಗದಿದ್ದರೆ ಅವು ನಮ್ಮನ್ನು ಏನೂ ಮಾಡುವುದಿಲ್ಲ".

ಉ: ಈ ಮಾತನ್ನು ನರೇಂದ್ರನು ಹುಡುಗರಿಗೆ ಹೇಳಿದನು.

೨. "ಭಯದ ಮಾತುಗಳನ್ನು ನಂಬಬಾರದು".

ಉ:ಈ ಮಾತನ್ನು ನರೇಂದ್ರನು ಗೆಳೆಯರಿಗೆ ಹೇಳಿದನು.

೩. "ಇದು ಹೇಗೆ ಸಾಧ್ಯ?"

ಉ: ಈ ಮಾತನ್ನು ಡಾಯರಸನ್ ಸ್ವಾಮಿ ವಿವೇಕಾನಂದರಿಗೆ ಕೇಳಿದರು.

೪. "ಶಕ್ತಿಯೇ ಜೀವನ; ದೌರ್ಬಲ್ಯವೇ ಮರಣ".

ಉ: ಇದು ಸ್ವಾಮಿ ವಿವೇಕಾನಂದರು ಜನರಿಗೆ ನೀಡಿದ ಸಂದೇಶ .

**ಈ. ಸ್ವಂತ ವಾಕ್ಯಗಳಲ್ಲಿ ಬಳಸಿರಿ. (Make your own sentences)**

೧. ಸಿದ್ಧನಾಗು: ಪರೀಕ್ಷೆ ಬರೆಯಲು ಸಿದ್ಧವಾಗುತ್ತಿದ್ದೇನೆ.

೨. ಏಕಾಗ್ರತೆ: ನಾವು ಪುಸ್ತಕವನ್ನು ಏಕಾಗ್ರತೆಯಿಂದ ಓದಬೇಕು.

೩. ಕಣ್ಮುಚ್ಚಿ: ನಾನು ಕಣ್ಮುಚ್ಚಿ ಧ್ಯಾನ ಮಾಡುತ್ತೇನೆ.

೪. ಕುತೂಹಲ: ನನಗೆ ಭೂತದ ಬಗ್ಗೆ ಕುತೂಹಲವಿದೆ.

೫. ಉಪಾಯ: ನನಗೆ ಒಂದು ಉಪಾಯ ಹೊಳೆಯಿತು.

**ಉ. ಬಿಟ್ಟ ಸ್ಥಳಗಳನ್ನು ತುಂಬಿರಿ. (Fill in the blanks)**

೧. ನರೇಂದ್ರನು ಧ್ಯಾನ ಮಾಡುತ್ತಿದ್ದಾಗ ಮೈಮೇಲೆ ಹಾವು ಹರಿದಾಡಿತು.

೨. ನರೇಂದ್ರನಿಗೆ ಭೂತದ ಬಗೆಗೆ ಕುತೂಹಲ ಇತ್ತು.

೩. ನರೇಂದ್ರನು ನಾನು ಓದುವಾಗ ಉರಿಯುವ ಕೆಂಡವನ್ನು ನನ್ನ ಮೇಲಿಟ್ಟರು

ಗೊತ್ತಾಗುವದಿಲ್ಲ ಎಂದನು.

ಳ. ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ.

ಋ. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. (Write opposite words)

ಕಷ್ಟ X ಸುಖ

ಜನನ X ಮರಣ

ಕೀರ್ತಿ X ಅಪಕೀರ್ತಿ

ಆಸೆ X ನಿರಾಸೆ

ಎ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ. (Split the words)

ಹಾವೊಂದು = ಹಾವು + ಒಂದು

ನರೇಂದ್ರ = ನರ + ಇಂದ್ರ

ನೂರಾರು = ನೂರು + ಆರು

ಹೀಗೆಂದರು = ಹೀಗೆ + ಎಂದರು

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ